ದಿನಾಂಕಃ 01-03-2021.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಪ್ರತಿವಾದಿಗಳಿಗೆ ಜಮೀನನ್ನು ಮಾರಾಟ ಮಾಡಿದ್ದು, ಅದಕ್ಕೆ ಸಂಬಂಧಿಸಿದ ದಾವೆಯಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ. ಪ್ರತಿವಾದಿಗಳು ತಮ್ಮ ಒಟ್ಟು ಕುಟುಂಬದ ಜಮೀನುಗಳಿಂದ ಬಂದ ಆದಾಯದಿಂದ ನನ್ನಿಂದ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವ್ಯಾಪಾರ ಮಾಡುತ್ತಾರೆ. ಹುಣಸೇಮರಗಳನ್ನು ಖರೀದಿಸಿ, ಹುಣಸೇ ಮತ್ತು ತೆಂಗಿನಕಾಯಿ ವ್ಯಾಪಾರ ಮಾಡುತ್ತಾರೆ. ನನಗೂ ಮತ್ತು ಪ್ರತಿವಾದಿಗಳಿಗೆ ತುಂಬಾ ವಿಶ್ವಾಸವಿದೆ ಎಂದರೆ ಸರಿಯಲ್ಲ. ಅವರು ನನ್ನೊಂದಿಗೆ ವಿಶ್ವಾಸದಿಂದಿಲ್ಲ, ಪರಿಚಯವೂ ಇಲ್ಲ ಎನ್ನುತ್ತಾರೆ. ಪ್ರತಿವಾದಿಗಳ ಮನೆಯ ವಿಚಾರಗಳು ನನಗೆ ಗೊತ್ತಿಲ್ಲ. ಸಣ್ಣತಾಯಮ್ಮನವರು ಪ್ರತಿವಾದಿ ಈರಣ್ಣನವರ ಸೊಸೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಆದಾಯ ಮತ್ತು ಅವರ ಕುಟುಂಬದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿ ಈರಣ್ಣನವರು ಅವರ ತಂಗಿ ಪುಟ್ಟರಂಗಮ್ಮನವರಿಗೆ ಜಮೀನನ್ನು ಬರೆದುಕೊಟ್ಟಿದ್ದನ್ನು ನಾನು ನೋಡಿಲ್ಲ , ನನ್ನ ಜಮೀನು ಮತ್ತು ಪ್ರತಿವಾದಿಗಳ ಜಮೀನು ಒಂದೇ ಕಡೆ ಇರುವುದರಿಂದ ಆ ವಿಚಾರ ನನಗೆ ಗೊತ್ತು. ಈರೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಹೀಗೇ ಸಾಕ್ಷಿ ನುಡಿಯಬೇಕೆಂದು ಈರೇಗೌಡರು ನನ್ನನ್ನು ಕರೆದುಕೊಂಡು ಬಂದರು ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.